**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 220/2024**

| | | |
|---|---|---|
| **ಸಾಕ್ಷಿದಾರನ ಹೆಸರು** | : ರಂಗಸ್ವಾಮಿ | **ಪಿ.ಡಬ್ಲ್ಯೂ– 6** |
| **ತಂದೆಯ ಹೆಸರು** | : ಚಿಕ್ಕದಾಸ | **ಸಿ.ಡಬ್ಲ್ಯೂ– 9** |
| **ವಯಸ್ಸು** | : 57 ವರ್ಷ | |
| **ಉದ್ಯೋಗ** | : ಕೂಲಿ ಕೆಲಸ | |
| **ವಾಸಸ್ಥಳ** | : ದಡದಹಳ್ಳಿ, ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿಃ24.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

**1.** ನನಗೆ ಮೂರು ಜನ ಮಕ್ಕಳು. ಅವರುಗಳೆಂದರೆ, ಚಂದ್ರು, ಜಯಲಕ್ಷ್ಮೀ ಮತ್ತು ಶ್ರೀನಿವಾಸ. ನಾನು ಗಾರೆ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ಎರಡು ಗಂಡು ಮಕ್ಕಳು ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ಚಾ.ಸಾಃ4 ನನ್ನ ಅಣ್ಣನ ಮಗ.

**2.** ನಾನು ದಿಃ– 23.08.2021 ರಂದು ಕೂಲಿ ಕೆಲಸಕ್ಕೆ ಹೋಗಿದ್ದೆ. ನನ್ನ ಇಬ್ಬರು ಗಂಡು ಮಕ್ಕಳು ಕೆಲಸಕ್ಕೆ ಹೋಗಿರಲಿಲ್ಲ. ನಾನು ಸಂಜೆಗೆ ಕೆಲಸ ಮುಗಿಸಿಕೊಂಡು ಸಂಜೆ 6.30–7 ಗಂಟೆಗೆ ಬರುತ್ತಿರುವಾಗ, ನನ್ನ ಮಗ ಶ್ರೀನಿವಾಸ ನನಗೆ ಫೋನ್ ಮಾಡಿ ಜೆ.ಎಸ್.ಎಸ್ ಆಸ್ಪತ್ರೆಗೆ ಬರಲು ಹೇಳಿದ್ದನು. ನಾನು ಜೆ.ಎಸ್.ಎಸ್ ಆಸ್ಪತ್ರೆಯ ಬಳಿ ಹೋದಾಗ ಅಲ್ಲಿ ಆತ ಇರಲಿಲ್ಲ. ನಂತರ ನಾನು ವಿಷಯ ತಿಳಿದುಕೊಂಡು ಕೆ.ಆರ್.ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಗೆ ಹೋದಾಗ ಶ್ರೀನಿವಾಸ ಮತ್ತು ರಂಗಸ್ವಾಮಿ ಇದ್ದರು. ಅವರು

ನನಗೆ ಚಂದ್ರು ತೀರಿಕೊಂಡನು ಎಂದು ತಿಳಿಸಿದರು. ನಾನು ಏನಾಯಿತು ಎಂದು ವಿಚಾರಿಸಿದಾಗ ಚಂದ್ರು ಮತ್ತು ರಂಗಸ್ವಾಮಿ ಚಿನ್ನ ಖರೀದಿಸಲು ಹೋಗಿದ್ದು, ಆಗ ಶೇಟು ಅಂಗಡಿಯ ಬಳಿ ಚಂದ್ರುವಿಗೆ ಯಾರೋ ಶೂಟ್ ಮಾಡಿರುತ್ತಾರೆ ಎಂದು ತಿಳಿಸಿದರು. ರಂಗಸ್ವಾಮಿ ಶೇಟು ಅಂಗಡಿಯ ಬಳಿ ಅಂಗಡಿಯ ಶೆಟರನ್ನು ತೆಗೆಯಲು ಹೋದಾಗ 4 ಜನ ಕಳ್ಳರು ಹೊರಗಡೆ ಬಂದು, ಚಂದ್ರುವಿಗೆ ಶೂಟ್ ಮಾಡಿರುತ್ತಾರೆ ಎಂದು ತಿಳಿಸಿದರು. ನನ್ನ ಮಗನ ಮೃತದೇಹವನ್ನು ಕೆ.ಆರ್.ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಆತನ ಎಡಹುಬ್ಬಿನ ಮೇಲೆ ಗಾಯ ಆಗಿತ್ತು. ನಂತರ ಬೆಳಿಗ್ಗೆ ಪೊಲೀಸರು ಬಂದು ನನ್ನನ್ನು ವಿಚಾರಣೆ ಮಾಡಿ ಬರವಣಿಗೆ ಮಾಡಿಕೊಂಡಿರುತ್ತಾರೆ. ನಂತರ 2.30–3 ಗಂಟೆಗೆ ಮೃತದೇಹವನ್ನು ನಮಗೆ ನೀಡಿರುತ್ತಾರೆ. ಪೊಲೀಸರ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ**

ಆರೋಪಿ ವಕೀಲರು ಗೈರು ಹಾಜರಿದ್ದು ಆರೋಪಿತರ ಪರ ಪಾಟೀ ಸವಾಲನ್ನು ಮಾಡಿರುವುದಿಲ್ಲ, ಹಾಗಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**

(ನ್ಯಾಯಾಧೀಶರಿಗೆ ಹಿಂದಿ ಭಾಷೆ ತಿಳಿದಿದ್ದು,
ಕನ್ನಡದಲ್ಲಿಯ ಸಾಕ್ಷ್ಯವನ್ನು ಹಿಂದಿ ಭಾಷೆಗೆ

ತರ್ಜುಮೆ ಮಾಡಿ ಆರೋಪಿಗಳಿಗೆ ಹೇಳಲಾಗಿರುತ್ತದೆ)

**III ADJ**, **Mysuru**.